# ಸತ್ಯ ಆತ್ಮವಿಶ್ವಾಸ ತುಂಬುವ ಹುಡುಗಿ

## ಗೌತಮಿ ಜಾದವ್

ಝೀ ಕನ್ನಡದ 'ಸತ್ಯ'ದ ಸತ್ಯ



◆ **ನಿಮ್ಮ ಅಭಿನಯ ಆರಂಭ ಹೇಗಾಯಿತು?**

'ನಾಗಪಂಚಮಿ' ಧಾರಾವಾಹಿಯಿಂದ ನನ್ನ ಬಣ್ಣದ ಪಯಣ ಆರಂಭವಾಯಿತು. ನಂತರ ಕನ್ನಡದಲ್ಲಿ ಮೂರು ತಮಿಳಿನಲ್ಲಿಯೂ ಒಂದು ಸಿನಿಮಾಗಳನ್ನು ಮಾಡಿದೆ. ದೀರ್ಘಕಾಲದ ನಂತರ ಮತ್ತೆ ನಾನು ಕಿರುತೆರೆಗೆ 'ಸತ್ಯ'ದ ಮೂಲಕ ಬಂದಿದ್ದೇನೆ. ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ಜಯನಗರದ ನ್ಯಾಶನಲ್ ಕಾಲೇಜಿನಲ್ಲಿ ಪದವಿ ಓದಿದೆ. ಜೊತೆಗೆ ಫ್ಯಾಷನ್ ಡಿಸೈನಿಂಗ್ ಕಲಿತಿದ್ದೇನೆ. ಕ್ರಿಯಾತ್ಮಕ ಚಟುವಟಿಕೆಯಲ್ಲಿ ಆಸಕ್ತಿ ಹೆಚ್ಚಿದೆ.

◆ **ನಿಮಗೆ ಎಂತಹ ಕನಸು ಇತ್ತು?**

ಓದುವಾಗ ಫ್ಯಾಷನ್ ಡಿಸೈನಿಂಗ್ ಮೋಹಕ್ಕೆ ತುತ್ತಾಗಿದ್ದೆ. ಅದನ್ನೇ ಮಾಡಬೇಕು ಎನ್ನುವುದು ನನ್ನ ಕಲ್ಪನೆಯಲ್ಲಿ ಇತ್ತು. ಆದರೆ ಅದಕ್ಕೂ ಮುನ್ನ ಡಾನ್ಸ್ ಕೂಡ ಮಾಡುತ್ತಿದ್ದೆ. ಜಿಮ್ನಾಸ್ಟಿಕ್ ಅಭ್ಯಾಸ ಮಾಡಲು ಹೋಗುತ್ತಿದ್ದೆ. ಆಗ ಬೇರೆ ಬೇರೆ ನಟಿಯರೂ ಅಲ್ಲಿಗೆ ಬರ್ತಾ ಇದ್ದರು. ಅವರನ್ನು ನೋಡಿದಾಗಲೆಲ್ಲ ನಾನೂ ನಟಿ ಆಗಬೇಕು ಎನ್ನುವ ಕನಸು ಮನಸಿನಲ್ಲಿ ಮೂಡುತ್ತಿತ್ತು. ಪರಿಚಿತರ ಮೂಲಕ 'ನಾಗಪಂಚಮಿ'ಗೆ ಅವಕಾಶ ಬಂತು ಅದರ ಮೂಲಕ ಅಭಿನಯದ ಹಾದಿ ಸಾಗಿದೆ.

◆ **ಜನಪ್ರಿಯತೆಯ ಏರಿಳಿತ ನಟರಲ್ಲಿ ಉಂಟು ಮಾಡುವ ಬದಲಾವಣೆಗಳು ಏನು?**

ನನ್ನ ವೃತ್ತಿಯನ್ನು 2011ರಲ್ಲಿ ಆರಂಭಿಸಿದೆ. ಅದು ಮುಗಿದು ದೀರ್ಘ ಕಾಲದ ನಂತರ ಸಿನಿಮಾ ಮಾಡಿದೆ. ಈಗ ಕಿರುತೆರೆಗೆ ಬಂದಿದ್ದೇನೆ. ಈ ಪಯಣಕ್ಕೆ ಸುಮಾರು ಹತ್ತು ವರ್ಷಗಳು ಸಂಧಿವೆ. ಆರಂಭದಲ್ಲಿ ನಾನಿನ್ನೂ ಓದುತ್ತಿದ್ದೆ. ಪೂರ್ಣಾವಧಿ ಕಲಾವಿದೆ ಆಗಿದ್ದು ಇತ್ತೀಚೆಗೆ. ಆ ಬಗ್ಗೆ ನನಗೆ ಗೊತ್ತಾಗುತ್ತಿರಲಿಲ್ಲ. ಪೂರ್ಣಾವಧಿ ಕಲಾವಿದೆ ಆಗಬೇಕು ಎಂದು ಯೋಚಿಸಿದ ನಂತರ ಈ ರೀತಿಯ ಏರಿಳಿತಗಳು ಸ್ವಲ್ಪ ಕಿಸಿವಿಯನ್ನು ಉಂಟು ಮಾಡುತ್ತದೆ ಎನ್ನುವುದು ಅರಿವಿಗೆ ಬಂತು. ವೈಯಕ್ತಿಕವಾಗಿ ನನಗೆ ಸಹನೆ–ತಾಳ್ಮೆ ಹೆಚ್ಚಿದೆ. ಯಾವುದೇ ತೀರ್ಮಾನವನ್ನು ಭಾವುಕಳಾಗಿ ತೆಗೆದುಕೊಳ್ಳುವುದಿಲ್ಲ. ನನಗೆ ಇಷ್ಟ ಇರುವ ಕ್ಷೇತ್ರದಲ್ಲಿ ನನ್ನ ಪಾಡಿಗೆ ನಾನು ಕೆಲಸ ಮಾಡುತ್ತಿರುತ್ತೇನೆ. ನಾನು ಬೇರೆ ಏನನ್ನೂ ಯೋಚನೆ ಮಾಡುವುದಿಲ್ಲ. ಒಳ್ಳೆಯ ಪಾತ್ರ ಸಿಗಬೇಕು ಎನ್ನುವ ಬಯಕೆ ಎಲ್ಲ ಸಮಯದಲ್ಲಿಯೂ ಇರುತ್ತದೆ.

◆ **ಸತ್ಯಳ ಬಗ್ಗೆ ಹೇಳುವುದಾದರೆ...**

ಆಕೆ ಸಾಮಾನ್ಯ ಹುಡಗಿಯಂತೆ ಅಲ್ಲ. ಅವಳು ನೋಡಲು ಹುಡುಗರಂತೆ ಕಾಣಿಸುತ್ತಾಳೆ. ಅವಳ ಹಾವಾಭಾವ ಮತ್ತು ಆಯ್ಕೆಗಳು ಇತರ ಹುಡುಗಿಯರಿಗಿಂತ ಭಿನ್ನ. ಆಕೆ ತುಂಬ ಶಕ್ತಿಶಾಲಿ. ಅವಳ ಈ ಎಲ್ಲ ವರ್ತನೆಗೆ ಪ್ರಮುಖ ಕಾರಣವೂ ಇದೆ. ಸಿಕ್ಕಾಪಟ್ಟೆ ಆತ್ಮವಿಶ್ವಾಸ ಮತ್ತು ಧೈರ್ಯ ಅವಳಿಗೆ ಇದೆ. ಪಾತ್ರಕ್ಕೆ ವೇಷ ಧರಿಸಿಕೊಡರೆ ನನಗೂ ಒಂದು ರೀತಿಯ ಜೋಷ್ ಬರುತ್ತದೆ. ಗೌತಮಿಯಾಗಿ ಪಾತ್ರ ನೋಡಿದರೆ ಸಂಪೂರ್ಣ ವಿರೋಧ ಮನೋಭಾವ ಕಾಣುತ್ತೆ. ಈ ಪಾತ್ರದ ಮೂಲಕ ಗೌತಮಿಗೂ ಒಂದು ರೀತಿಯ ಧೈರ್ಯ ಬಂದಿದೆ. ವೀಕ್ಷಕರಿಗೂ ಇದು ಆತ್ಮವಿಶ್ವಾಸವನ್ನು ತುಂಬುತ್ತದೆ ಎಂದು ಅನ್ನಿಸುತ್ತದೆ.

◆ **ಇಂತಹ ಒಂದು ಪಾತ್ರ ಮಾಡಲೇಬೇಕು ಎನ್ನುವ ಕನಸು ನಿಮಗೆ ಇದೆಯೇ?**

ಸೃಜನಶೀಲ ಮನಸ್ಸು ಇರುವ ನನಗೆ ಏಕತಾನತೆಯ ಪಾತ್ರ ಇಷ್ಟ ಆಗಲ್ಲ. ಭಿನ್ನತೆ ಇರಬೇಕು ಎಂದು ಬಯಸಿದ್ದು ನಿಜ. ಆದರೆ ಸತ್ಯಳಂತಹ ಪಾತ್ರವನ್ನು ಯಾವತ್ತೂ ನಾನು ಕಲ್ಪನೆಯನ್ನೇ ಮಾಡಿಕೊಂಡಿರಲಿಲ್ಲ. ಯಾವುದೇ ಪಾತ್ರ ಆದರೂ ಸವಾಲಿನಿಂದ ಕೂಡಿರಬೇಕು ಎನ್ನುವುದಷ್ಟೇ ನನ್ನ ಯೋಚನೆ. ಪಾತ್ರಕ್ಕೆ ಸಂಪೂರ್ಣ ನನ್ನ ಪರಿಶ್ರಮ ಹಾಕಿದರೂ ಇನ್ನೂ ಕಡಿಮೆ ಅನ್ನುವಂತೆ ಇರಬೇಕು ಎನ್ನುವುದು ನನ್ನ ಮನೋಸ್ಥಿತಿ. ಈಗ ನಿರ್ವಹಿಸುತ್ತಿರುವ ಪಾತ್ರಕ್ಕೆ ಅಂತಹ ಕನಸುಗಳನ್ನು ತುಂಬುವ ಸಾಮರ್ಥ್ಯ ಇದೆ ಎಂದು ಅನ್ನಿಸುತ್ತದೆ. ಮುಂದೆ ಕೂಡ ಇಂತಹದ್ದೇ ಸವಾಲಿನ ಪಾತ್ರಗಳು ಎದುರಾಗಬೇಕು. ಐತಿಹಾಸಿಕ ಹಾಗೂ ಪೌರಾಣಿಕ ಪಾತ್ರದಲ್ಲಿಯೂ ನನ್ನನ್ನು ನಾನು ಕಾಣಬೇಕು ಎನ್ನುವ ಯೋಚನೆ ಖಂಡಿತ ಇದೆ.

◆ **ಕಿರುತೆರೆ– ಹಿರಿತೆರೆಯ ನಿಮ್ಮ ಕಾರ್ಯಚಟುವಟಿಕೆಯಲ್ಲಿ ಕಂಡುಕೊಂಡ ಭಿನ್ನತೆ ಏನು?**

ವೈಯಕ್ತಿಕವಾಗಿ ನನಗೆ ಅಂತಹ ಭಿನ್ನತೆ ಕಂಡಿಲ್ಲ. ಏಕೆಂದರೆ ನನ್ನ ಪಾಲಿನ ಕೆಲಸದಲ್ಲಿ ಎರಡೂ ಕಡೆ ಒಂದೇ ರೀತಿ ಇರುತ್ತದೆ. ಗುಣಾತ್ಮಕ ಅಂಶ ಏನೆಂದರೆ ಕಿರುತೆರೆಯಲ್ಲಿ ದೊಡ್ಡ ಪ್ರಮಾಣದಲ್ಲಿ ವೀಕ್ಷಕರ ಮನಸ್ಸನ್ನು ತಟ್ಟುವ ಸಾಧ್ಯತೆ ಹೆಚ್ಚಿದೆ ಎಂದು ನನಗೆ ಅನಿಸಿದೆ. ಇದನ್ನು ಬಿಟ್ಟರೆ ದೊಡ್ಡ ಅಂತರ ಏನೂ ಇಲ್ಲ ಎನ್ನುವುದು ನನ್ನ ಅನುಭವ.

■ **ರಾಘವೇಂದ್ರ ಕೆ.**